ವಿಶ್ವದಲ್ಲಿಯೇ ಅತ್ಯಂತ ಎತ್ತರದ ಎರಡನೇ ಅಂತರರಾಷ್ಟ್ರೀಯ ಹೆದ್ದಾರಿಯಾದ ಪಾಮಿರ್ ದಾರಿಯಲ್ಲಿ ಕೈಗೊಂಡ 1150 ಕಿ.ಮೀ. ದೂರದ ಸೈಕಲ್ ಪಯಣ ಹಲವು ಜೀವನಪಾಠಗಳನ್ನೂ ಕಲಿಸಿತು. ಪ್ರಾಕೃತಿಕ ಸೌಂದರ್ಯದ ಮೋಹಕತೆಯ ಜೊತೆಗೆ, ಪ್ರಕೃತಿಯ ಸನ್ನಿಧಿಯಲ್ಲಿ ಮನುಷ್ಯನ ಕುಬ್ಜತೆಯ ಅರಿವಾಯಿತು. ಇದೆಲ್ಲಕ್ಕೂ ಮುಖ್ಯವಾದದ್ದು, ದೇಶಭಾಷೆಗಳನ್ನು ಮೀರಿದ ಮನುಷ್ಯಪ್ರೇಮ ಹಾಗೂ ಸಂಕಷ್ಟದ ಸಂದರ್ಭದಲ್ಲೂ ಬತ್ತದಿರುವ ಜೀವನೋತ್ಸಾಹದ ದರ್ಶನ.

■ ಗಣೇಶ್ ನಾಯಕ್





ತಾಜಿಕೀ ಮಹಿಳೆ ಬೇಯಿಸಿದ ಬ್ರೆಡ್ಡಿನೊಟ್ಟಿಗೆ

## ಸಜ್ಜನರು, ಅತಿಥಿಪ್ರಿಯರು

ಆರ್ಥಿಕವಾಗಿ ಹಿಂದುಳಿದ ದೇಶವಾದರೂ, ತಜಕಿಸ್ತಾನದ ಜನರು ಸಭ್ಯರು, ಸಜ್ಜನರು, ಅತಿಥಿಪ್ರಿಯರು. ಆ ಪ್ರವಾಸದುದ್ದಕ್ಕೂ ಅವರ ಸಹಜ ಒಳ್ಳೆಯತನದ ಹಲವು ಮಧುರ ಅನುಭವಗಳಾದವು. ಖೊರೋಗ್‌ನ ದಾರಿಯಲ್ಲೊಮ್ಮೆ, ಸಂಜೆ ಹೊತ್ತಿಗೆ ಹಠಾತ್ತಾಗಿ ಶುರುವಾದ ಜೋರು ಮಳೆಯಿಂದ ತಪ್ಪಿಸಿಕೊಳ್ಳಲು ಬೀದಿ ಬದಿಯ ಹಳೆಯ ಕಟ್ಟಡವೊಂದರಲ್ಲಿ ಆಸರೆ ಪಡೆದೆ. ಸುಮಾರು ಹೊತ್ತಾದರೂ ಮಳೆ ನಿಲ್ಲಲೇ ಇಲ್ಲ. ಅಷ್ಟರಲ್ಲಿ ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ, ಅಲ್ಲಿನ ಗೃಹಸ್ಥರೊಬ್ಬರು ಆದರಪೂರ್ವಕವಾಗಿ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ನನಗೆ ಬೇಕಾದ ಎಲ್ಲಾ ಸೌಕರ್ಯ ಮಾಡಿಕೊಟ್ಟದ್ದಲ್ಲದೆ, ರಾತ್ರಿ ಭೋಜನಕ್ಕೆ ವಿಶೇಷ ತಾಜಿಕೀ ಖಾದ್ಯಗಳ ಅಡುಗೆ ಬಡಿಸಿ ಉಪಚರಿಸಿದರು. ರಾತ್ರಿ ಅವರಲ್ಲೇ ಇರಿಸಿಕೊಂಡು, ಬೆಳಿಗ್ಗೆ ಸ್ವಾದಿಷ್ಟ ಉಪಾಹಾರದ ನಂತರವೇ ಅವರು ನನ್ನನ್ನು ಬೀಳ್ಕೊಟ್ಟಿದ್ದು. ದಾರಿಯಲ್ಲಿ ಸಿಕ್ಕಿದ ತೀರಾ ಅಪರಿಚಿತನೊಬ್ಬನಿಗೆ ತೋರಿಸಿದ ಪ್ರೀತಿ, ವಿಶ್ವಾಸ, ಸತ್ಕಾರ ನಿಜಕ್ಕೂ ಎಂದಿಗೂ ಮರೆಯಲಾಗದ್ದು.

ಆಲೀಚೂರ್ ಎನ್ನುವ ಹಳ್ಳಿಯಲ್ಲಿ ಮಧ್ಯಾಹ್ನದ ಬಿಸಿಲಿಗೆ ಮರವೊಂದರ ಕೆಳಗೆ ವಿರಮಿಸುತ್ತಿದ್ದಾಗ, ಅಲ್ಲಿಯೇ ಆಡಿಕೊಂಡಿದ್ದ ಕೆಲವು ಮಕ್ಕಳು ನನ್ನ ಕೈ ಹಿಡಿದು ಅವರ ಮನೆಗೆ ಕರೆದುಕೊಂಡು ಹೋದರು. ಅಲ್ಲಿದ್ದ ಹಿರಿಯ ಮಹಿಳೆಯೊಬ್ಬರು ನನ್ನನ್ನು ಸ್ವಾಗತಿಸಿ ತಾವೇ ಬೇಯಿಸಿದ ನಾನ್ ಎಂದು ಕರೆಯುವ ರುಚಿಕರವಾದ ತಜಕಿ ಬ್ರೆಡ್ಡನ್ನು ತಿನ್ನಿಸಿದರು. ತಮ್ಮ ಹರಕು ಮುರುಕು ಉರ್ದು ಮತ್ತು ಇಂಗ್ಲಿಷ್ ಮೂಲಕ ತಮ್ಮ ಸಂಸಾರದ ಸುಖ ದುಃಖಗಳನ್ನು ಆತ್ಮೀಯವಾಗಿ ಹಂಚಿಕೊಂಡರು.

ಉತ್ತಮ ವಿದ್ಯಾಭ್ಯಾಸ, ಒಳ್ಳೆಯ ಉದ್ಯೋಗ ಹಾಗೂ ಜೀವನ ಸೌಲಭ್ಯಗಳಿಲ್ಲದೆ ಶ್ರಮದಾಯಕ ಬದುಕಿನ ನಡುವೆಯೂ, ಯಾವುದಕ್ಕೂ ಕುಗ್ಗದೇ ಅರಳುವ ಅಲ್ಲಿನ ಜನರ ಅದಮ್ಯ ಜೀವನೋತ್ಸಾಹ ನನ್ನನ್ನು ಬೆರಗುಗೊಳಿಸಿತು. ಕೊರೊನಾ ಹಾವಳಿಯ ಕಠಿಣ ಪರಿಸ್ಥಿತಿಯಲ್ಲಿ ನಮ್ಮೆಲ್ಲರ ಮುಂದಿನ ಬದುಕಿಗೆ ಆ ಜೀವನೋತ್ಸಾಹವೇ ಪ್ರೇರಣೆಯಾಗಿ ನಾಳೆಗಳ ಬಗ್ಗೆ ಆಶಾಭಾವ ತುಂಬುವಂತಾಗಲಿ.